ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಎಸ್.ಆರ್.ಪ್ಲೆಸ್, ಬೆಂಗಳೂರು-02.

ಸಂಖ್ಯೆ:ಆಯುಕ್ತರು/ಪಿಆರ್/(4) 2787/19-20 ದಿನಾಂಕ: 04-07-2019

ಸುತ್ತೋಲೆ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2019-20ನೇ ಸಾಲಿನ ಆಯವ್ಯಯದಲ್ಲಿ ಬಿಡುಗಡೆ ಮಾಡಿರುವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನಿಗದಿಪಡಿಸಿದ ಅನುದಾನ ಕಾಮಗಾರಿಗಳನ್ನು ಮೆ|| ಬಿ.ಆರ್.ಐ.ಟಿ.ಎಲ್ ಮುಖಾಂತರ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ ಆಇ 541 ಮೆಟ್ರೊ -12/2018 ದಿನಾಂಕ: 28.05.2018

2. ರವರ ಪತ್ರವ್ಯವಹಾರ ಸಂಖ್ಯೆ: ಮಪಾಬಂಪಿ/ಆ/ಬಿಎಸ್‌ಆರ್(4)/10702/2018-19 ದಿನಾಂಕ: 18.02.2019

3. ಪೂಜ್ಯ ಮಹಾಪೌರರ ಟಿಪ್ಪಣಿ ಸಂಖ್ಯೆ: ಎಂ.ಪಿ.ಎಸ್/ಪಿಜಿಆರ್/718/2018-20 ದಿನಾಂಕ:01.07.2019

.....

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸಾರ್ವಜನಿಕ ಸಂಸ್ಥೆಗಳಲ್ಲಿ ಪಾರದರ್ಶಕತೆ ಅಧಿನಿಯಮ – 1999ರ ಕಲಂ 4(ಜಿ)ರ ಪದತ್ತವಾದ ಅಧಿಕಾರ ಪ್ರಯೋಗಿಸಿ, 2019-20ನೇ ಸಾಲಿಗೆ ಸಂಬಂಧಿಸಿದಂತೆ ಸರ್ಕಾರದ ಇಲಾಖೆಗಳು ಮತ್ತು ಪಾಲಿಕೆ ಸಂಸ್ಥೆಗಳಾ ಸಂಸ್ಥೆಗಳು ಉಲ್ಲೇಖಿತ ಅಧಿಸೂಚನೆಯಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ನೇರವಾಗಿ ಮೆ|| ಬಿ.ಆರ್.ಐ.ಟಿ.ಎಲ್ ಸಂಸ್ಥೆ ಮುಖೇನ ನಿರ್ವಹಿಸಲು ಅಧಿಸೂಚನೆ ಹೊರಡಿಸಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2019-20ನೇ ಸಾಲಿನ ಆಯವ್ಯಯಕ್ಕೆ ಅನುಮೋದನೆ ದೊರೆತಿದ್ದು, ಸದರಿ ಆಯವ್ಯಯದಲ್ಲಿ ಮಾನ್ಯ ಬೆಂಗಳೂರು ಉಸ್ತುವಾರಿ ಸಚಿವರ ವಿವೇಚನೆ, ಪೂಜ್ಯ ಮಹಾಪೌರರ ವಿವೇಚನೆ, ಉಪ ಮಹಾಪೌರರ ವಿವೇಚನೆ, ಆಡಳಿತ ಪಕ್ಷ ಮತ್ತು ಶೇಷಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿವೇಚನೆ ಮೇರೆಗೆ ಒಟ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುದಾನ ಕಂಡಿಕೆ ಮಾಡಲಾಗಿರುತ್ತದೆ.

ಉಲ್ಲೇಖಿತ (3)ರ ಪತ್ರದಲ್ಲಿ ಪೂಜ್ಯ ಮಹಾಪೌರರು, ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಮತ್ತು ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಅತ್ಯಾವಶ್ಯಕವಾಗಿದ್ದು, ಈ ಬಗ್ಗೆ ನಗರದ ಹಲವು ಪ್ರದೇಶಗಳನ್ನು ಪರಿಶೀಲಿಸಿದ ಸಮಯದಲ್ಲಿ ಸದ ಈ ರೀತಿ ಹದಗೆಟ್ಟಿರುವ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗಗಳನ್ನು ಗಮನಿಸಲಾಗಿದ್ದು, ಸ್ಥಳೀಯ ಸಾರ್ವಜನಿಕರು ಮತ್ತು ಜನ ಪ್ರತಿನಿಧಿಗಳು ಸಹ ತೀವ್ರವಾಗಿ ಬರ್ಜಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮನವಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾಮಗಾರಿಗಳನ್ನು ಟೆಂಡರ್ ಕರ್ಯಾಸಿಸಿ ಕೈಗೊಂಡಲ್ಲಿ, ಕಾಮಗಾರಿ ಅನುಷ್ಠಾನ ವಿಳಂಬವಾಗುವ ಸಂಭವವಿದ್ದು, ಮುಂಗಾರು ಮಳೆ ಇನ್ನೇನು ಆರಂಭವಾಗಿದ್ದು, ಪ್ರಸ್ತಾವಿತ ಪ್ರದೇಶದಲ್ಲಿನ ರಸ್ತೆ, ಚರಂಡಿ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ತೀವ್ರವಾಗಿ ಆರಂಭಿಸಲು 2019-20ನೇ ಸಾಲಿನ ಆಯವ್ಯಯದಲ್ಲಿ ಕಂಡಿಕೆ ಮಾಡಲಾಗಿರುವ ಮಾನ್ಯ ಬೆಂಗಳೂರು ಉಸ್ತುವಾರಿ ಸಚಿವರ ವಿವೇಚನೆ, ಪೂಜ್ಯ ಮಹಾಪೌರರ ವಿವೇಚನೆ, ಉಪ ಮಹಾಪೌರರ ವಿವೇಚನೆ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿವೇಚನೆ ಸಲಿಗೆ ಒಟ್ಟಪ್ಪ ಅನುದಾನದಲ್ಲಿ, ತುರ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕಿರುವುದರಿಂದ, ಸದರಿ ಅನುದಾನದ ಕಾಮಗಾರಿಗಳಿಗೆ ಕೆ.ಟಿ.ಪಿ.ಪಿ

ಪಾಲಿಕೆ ಕಲಂ 4(ಜ) ಅಡಿ ಬಿಡಾಯುಕ್ತ ನಿಧಿ, ಕೆ.ಆರ್.ಐ.ಡಿ.ಬಿ.ಎಲ್ ಸಂಸ್ಥೆ ಮತ್ತಾಂದ ಕೈಗೆತ್ತಿಕೊಳ್ಳಲು ಸೂಕ್ತ ಆದೇಶ ಹೊರಡಿಸಲು ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-20ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸಂಗ್ರಹವಾಗಿರುವ ಅನುದಾನ ರಾಜಧಾನಿಯನ್ನು ಮೆ॥ ಕೆ.ಆರ್.ಐ.ಡಿ.ಬಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಕರ್ನಾಟಕ ಸಾರ್ವಜನಿಕ ಸಂಸ್ಥೆಗಳಲ್ಲಿ ಪಾರದರ್ಶಕತೆ ಅಧಿನಿಯಮ – 1999ರ ಕಲಂ 4(ಜ)ಅಡಿ ಪಾರದರ್ಶಕತೆ ಆಯವ್ಯಯದಲ್ಲಿ ಬಿಡಾಯುಕ್ತ ನಿಧಿ ಸರ್ಕಾರವು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, 2018-20ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಒಳಚರಂಡಿ ಅನುದಾನಗಳಾದ ಮಾನ್ಯ ಬೆಂಗಳೂರು ಉಸ್ತುವಾರಿ ಸಚಿವರ ಬಜೆಟ್ ಭಾಷಣ, ಮಾನ್ಯ ಮುಖ್ಯಮಂತ್ರಿಗಳವರ ಬಜೆಟ್ ಭಾಷಣ, ಉಪ ಮುಖ್ಯಮಂತ್ರಿಗಳವರ ಬಜೆಟ್ ಭಾಷಣ ಮತ್ತು ತೆಲಗೆ ಮತ್ತು ಇತರೆ ಸ್ಥಾಯಿ ಸಮಿತಿಯ ಮುಂದಿಲು ನಿಗದಿ ಒಟ್ಟಪಟ್ಟ ಅನುದಾನದಲ್ಲಿ ಸರ್ಕಾರದ ಅಧಿಸೂಚನೆಯಲ್ಲಿ ಬಿಡಾಯುಕ್ತ ನಿಧಿ ಸೃಜಿಸಿರುವ ಕಾಮಗಾರಿಗಳನ್ನು ಮಾತ್ರ (ರೂ.50.00 ಲಕ್ಷಗಳಿಗೆ ಮೀರದಂತಹ ಕಾಮಗಾರಿಗಳಿಗೆ ಮಾತ್ರ ರ್ಯಾಂಡಮೈಸೇಷನ್ ಮಾಡಿ) ಅನುಷ್ಠಾನಗೊಳಿಸಲು ನೋಡಲ್ ಅಧಿಕಾರಿಯಾಗಿ ಮೆ॥ ಕೆ.ಆರ್.ಐ.ಡಿ.ಬಿ.ಎಲ್ ಸಂಸ್ಥೆಗೆ ನಿಯೋಜಿಸಲು ಬಿಬ್ಬಾ ಮುಖ್ಯ ಅಭಿಯಂತರರುಗಳು ಮತ್ತು ಕಾರ್ಯಪಾಲಕ ಅಭಿಯಂತರರುಗಳು ಕ್ರಮವಹಿಸಲು ಸೂಚಿಸಿದೆ.

ಅದರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-20ನೇ ಸಾಲಿನ ಆಯವ್ಯಯದಲ್ಲಿ ತಾವು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸಂಗ್ರಹವಾಗಿರುವ ಬಿಬ್ಬಾ ಅನುದಾನಗಳನ್ನು (ಮೇಲ್ಕಂಡ ಅನುದಾನಗಳನ್ನು ಹೊರತುಪಡಿಸಿ) ಸಂಬಂಧಪಟ್ಟ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ, ನಿಯಮಾನುಸಾರ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ಕೋರಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು

1. ಮಾನ್ಯ ಮುಖ್ಯಮಂತ್ರಿಗಳ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಗೆ ಕಳುಹಿಸಿದೆ.
2. ಉಪ ಮುಖ್ಯಮಂತ್ರಿಗಳ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಗೆ ಕಳುಹಿಸಿದೆ.
3. ವಿವಿಧ ಪಕ್ಷದ ನಾಯಕರುಗಳಿಗೆ ಅವಗಾಹನೆಗೆ ತರಲು ಆಪ್ತ ಸಹಾಯಕರುಗಳಿಗೆ ಕಳುಹಿಸಿದೆ.
4. ವಿಶೇಷ ಆಯುಕ್ತರು (ಯೋಜನೆ)
5. ವಿಶೇಷ ಆಯುಕ್ತರು (ಹಣಕಾಸು)
6. ಪ್ರಧಾನ ಅಭಿಯಂತರರು
7. ವಲಯ ಜಂಟಿ/ಜಂಟಿ ಆಯುಕ್ತರುಗಳಿಗೆ
8. ಎಲ್ಲ ಮುಖ್ಯ ಅಭಿಯಂತರರುಗಳಿಗೆ ಸೂಕ್ತ ಕ್ರಮಕ್ಕಾಗಿ.
9. ಮುಖ್ಯ ಹಣಕಾಸು ಅಧಿಕಾರಿ / ಮುಖ್ಯ ಲೆಕ್ಕ ಅಧಿಕಾರಿ.
10. ಕಛೇರಿ ಪ್ರತಿಗಾಗಿ.